ಮನೆಯಲ್ಲಿ ತೆಲುಗು, ಶಾಲೆಯಲ್ಲಿ ಕನ್ನಡವನ್ನೋದುತ್ತ ಬೆಳೆದ. ಚಿಕ್ಕಂದಿನಲ್ಲಿ ದೊಡ್ಡಪ್ಪನ ಸಹವಾಸ ಅವನಿಗೆ ಅತ್ಯಂತ ಪ್ರಿಯವಾಗಿತ್ತು. ದೊಡ್ಡಪ್ಪ ನಾರಾಯಣರೆಡ್ಡಿ ಸ್ವಾತಂತ್ರ್ಯ ಹೋರಾಟಗಾರನಾಗಿದ್ದ. ಖಾದಿ ತೊಟ್ಟು ಹೊರಟರೆ ಎಲ್ಲರೂ ಗೌರವದಿಂದ ನೋಡುತ್ತಿದ್ದರು. ಸತ್ಯ ಅವನ ಹಿಂದೆ ಬಾಲದಂತೆ ರಾಮಾಯಣ, ಮಹಾಭಾರತ, ಹರಿಶ್ಚಂದ್ರನ ಕಥೆಗಳನ್ನು ಕೇಳುತ್ತ ನಡೆಯುತ್ತಿದ್ದ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಡೆದ ಘಟನೆಗಳನ್ನೆಲ್ಲ ವಿವರಿಸುವಾಗ ಮೈಯೆಲ್ಲ ಕಿವಿಯಾಗುತ್ತಿದ್ದ. ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡದ್ದು, ಚಲೇಜಾವ್ ಚಳವಳಿ, ಬ್ರಿಟಿಷರ ಗುಂಡಿನೇಟು ತಪ್ಪಿಸಿಕೊಂಡು ಅವರಿಗೆ ಚಳ್ಳೆಹಣ್ಣು ತಿನ್ನಿಸಿದ್ದು, ತುಂಡು ಪಂಚೆಯುಟ್ಟು ಗಾಂಧೀಜಿ ಲಂಡನ್ನಿನ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದು... ಕೇಳುತ್ತಿದ್ದರೆ ರೋಮಾಂಚನವಾಗುತ್ತಿತ್ತು. ಯಾವುದೋ ಸಿನಿಮಾದಂತೆ ಭಾಸ. ಅದರಲ್ಲಿ ಗಾಂಧೀಜಿ ಹೀರೊ ಆಗಿದ್ದರೆ ದೊಡ್ಡಪ್ಪ ಪೋಷಕ ನಟನಾಗಿದ್ದ. ಸಾಬರಮತಿ ಆಶ್ರಮದಲ್ಲಿ ಕೆಲವು ದಿನಗಳನ್ನು ಗಾಂಧೀಜಿಯ ಜೊತೆ ಕಳೆದಿದ್ದ. ಆಶ್ರಮದ ಶಿಸ್ತು, ಪ್ರಾರ್ಥನೆಗಳು, ಎಲ್ಲರೂ ಸರದಿಯಂತೆ ಎಲ್ಲ ಕೆಲಸಗಳನ್ನೂ ಮಾಡಬೇಕಾಗಿದ್ದುದು ಶೌಚಾಲಯದ ಸ್ವಚ್ಛತೆಯನ್ನೂ ಒಳಗೊಂಡಿತ್ತು. ಗಾಂಧೀಜಿಯ ಸತ್ಯನಿಷ್ಠೆ, ಆತ್ಮಸಂಯಮ, ಮನೋನಿಗ್ರಹ ಕೇಳಿ ಹೀಗೇ ಇರಬೇಕೆಂಬ ಮೂರ್ತಭಾವ ಮನದಲ್ಲಿ ರೂಪುಗೊಳ್ಳಲಾರಂಭಿಸಿತು. ಗಾಂಧೀಜಿ ಬಗೆಗಿನ ಪುಸ್ತಕಗಳನ್ನು ಓದುತ್ತ ಅವನು ಅದನ್ನು ಆಗಾಗ ಕೆತ್ತಿ... ಕಟೆದು ಶಿಲ್ಪದಂತೆ ತನ್ನ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡುಬಿಟ್ಟ. ಸತ್ಯ ಸತ್ಯವ್ರತನಾದ. ಗಾಂಧೀಜಿ ಅವನ ಆರಾಧ್ಯ ದೈವವಾದರು.

ಮೊದಲೆಲ್ಲ ಮನೆಯಲ್ಲಿ ಇದು ದೊಡ್ಡ ವಿಷಯವಾಗದೇ ಅಭಿಮಾನದ ಮಾತಾಗಿತ್ತು. "ದೊಡ್ಡಪ್ಪ ಇವನ ತಲೆ ಮೇಲೆ ಕೈಯಿಟ್ಟು ಹೋಗಿದ್ದಾನೆ" ಎಂದು ನಗುತ್ತಿದ್ದರು. ಅನೇಕರು ಗಾಂಧೀಜಿಯನ್ನು ಆರಾಧಿಸುವ ಕಾಲಘಟ್ಟದಲ್ಲಿ ಇದು ವಿಚಿತ್ರವೆನಿಸಲಿಲ್ಲ. ಅವನ ಕೋಣೆಯಲ್ಲೆಲ್ಲ ಗಾಂಧೀಜಿಯ ಫೋಟೊಗಳು ರಾರಾಜಿಸಿದವು. ಆದರೆ, ದಿನಕಳೆದಂತೆ ಅವನ ಸತ್ಯವ್ರತ ಕೂಡುಕುಟುಂಬಕ್ಕೆ ಬಿಸಿ ಮುಟ್ಟಿಸತೊಡಗಿತ್ತು. ಮನೆಯ ತೆಂಗಿನಕಾಯಿಗಳನ್ನು ಗಂಡಸರಿಗೆ ತಿಳಿಯದಂತೆ ಹೆಂಗಳೆಯರು ಮಾರುವ ವಿಚಾರವನ್ನು ಹೇಳಿ ಹೆಂಗಸರ ಕೋಪಕ್ಕೆ ಗುರಿಯಾಗಿದ್ದ. ಒಮ್ಮೆ ಅಪ್ಪ ಶ್ರೀಪತಿರೆಡ್ಡಿಗೆ ಯಾವುದೋ ಕೇಸಿನಲ್ಲಿ ತೊಂದರೆಯಾಗಿತ್ತು. ಆಫೀಸಿನಿಂದ ಯಾರಾದರೂ ಕರೆಯಲು ಬಂದರೆ ಇಲ್ಲವೆಂದು ಹೇಳಲು ತಿಳಿಸಿದ್ದ. ಜವಾನ ಬಂದವನು ಇವನನ್ನೇ ಕೇಳಬೇಕೆ? "ಅಗೋ ನೋಡಿ. ಒಳಗಿನ ಕೋಣೆಯಲ್ಲಿದ್ದಾರೆ" ಎಂದುಬಿಟ್ಟ. ಇವನನ್ನು ದುರುಗುಟ್ಟಿಕೊಂಡು ನೋಡಿ ಆಫೀಸಿಗೆ ತೆರಳಿದವರು ಬಂದ ಮೇಲೆ ಚಾಟಿ ಬೀಸಿ ಬಾಸುಂಡೆ ಬರಿಸಿದ್ದರು.

ಇದರಿಂದ ಅವನ ಸತ್ಯನಿಷ್ಠೆ ಕಡಿಮೆಯಾಗಲಿಲ್ಲ ಬಿಡಿ. ಶಾಲೆಯಲ್ಲೂ ಮುಂದುವರೆಯಿತು. ಪರೀಕ್ಷೆಯಲ್ಲಿ ಕಾಪಿ ಮಾಡುತ್ತಿದ್ದ ಕೃಷ್ಣನ ಬಗ್ಗೆ ಶಿಕ್ಷಕರಿಗೆ ಹೇಳಿಬಿಟ್ಟ. ಅವರು ಪೇಪರ್ ಕಸಿದು ಅವನನ್ನು ಹೊರಗೆ ನಿಲ್ಲಿಸಿದರು. ಓಡಿಬಂದ ಮುಖ್ಯೋಪಾಧ್ಯಾಯರು ಇನ್ನೊಮ್ಮೆ ಮಾಡಬೇಡವೆಂದು ಪ್ರೀತಿಯಿಂದ ಹೇಳಿ ಮತ್ತೆ ಕೂರಿಸಿದರು. ಶಿಕ್ಷಕರನ್ನು ಕರೆದು, "ನಮ್ಮ ಶಾಲೆಯನ್ನೇ ಕೊಂಡ್ಕೊಳ್ಳೋವಷ್ಟು ಶ್ರೀಮಂತ ಅವರಪ್ಪ" ಎಂದು ಬುದ್ಧಿವಾದ ಹೇಳಿದರು. ಘಟನೆ ಅಷ್ಟಕ್ಕೇ ನಿಲ್ಲಲಿಲ್ಲ. ಮರುದಿನ ಕೃಷ್ಣ ಗುಂಪು ಕಟ್ಟಿಕೊಂಡು ಬಂದು ಇವನ ಕೆನ್ನೆಗೆ ಹೊಡೆದಿದ್ದ. ಇವನು ಅಹಿಂಸಾವಾದಿಯಾಗಿ ಇನ್ನೊಂದು ಕೆನ್ನೆ ತೋರಿಸಿದ್ದ. ಬೆಂಬಲಿಸಿದ ಗೆಳೆಯರೂ ಸೇರಿ ತರಗತಿಯಲ್ಲಷ್ಟೇ ಅಲ್ಲ... ಶಾಲೆಯಲ್ಲೇ ಎರಡು ಬಣಗಳಾದವು. ಹಣಾಹಣಿಯ ಕಣಗಳಾದವು. "ಮರಿಗಾಂಧಿ" ಎಂಬ ಕೊಂಕು ಮಾಮೂಲಾಯಿತು. ತೆರೆಮರೆಯ ವ್ಯವಹಾರಗಳಿಗೆಲ್ಲ ಸಿಂಹಸ್ವಪ್ನದಂತಿದ್ದ ಸತ್ಯ. ಇದು ಬೆಳೆಯುತ್ತಲೇ ಹೋಯಿತೇ ವಿನಃ ಮುರುಟಲಿಲ್ಲ. ಮನೆಯಲ್ಲೂ ಚಿಕ್ಕಪ್ಪ ಕೆಲಸದ ನಿಂಗಿಯ ಜಡೆ ಎಳೆದದ್ದು, ಹೊಲದಲ್ಲಿ ಸರಸಿಯನ್ನು ಭೇಟಿಯಾದದ್ದು, ತಮ್ಮ ಗಣಿತದಲ್ಲಿ ಸೊನ್ನೆ ಪಡೆದು ಅಂಕಪಟ್ಟಿಯನ್ನೇ ಬಚ್ಚಿಟ್ಟದ್ದು... ಎಲ್ಲ ಬಯಲೋ ಬಯಲು. ತಾಯಿತಂದೆಯರಿಗೆ ಇವನು ಸೆರಗಿನ ಕೆಂಡ. ಆದರೆ, ಜಾಣ. ಚೆನ್ನಾಗಿ ಓದುತ್ತಿದ್ದ ಎಂಬುದೊಂದೇ